ಮತ್ತೊಮ್ಮೆ ನೀರನ್ನು ಬೊಗಸೆಯಲ್ಲಿ ತುಂಬಿಕೊಂಡು ಮಾರಿ ಮೇಲೆ ಕೈಯ್ಯಾಡಿಸಿಕೊಂಡ. ನಂತರ ಚಹಾದ ಕಲೆಗೂ ನೀರು ಹಣಿಸಿ, ಸ್ವಚ್ಛವಾಗಿ ಒರೆಸಿ, ನೀಟು ಮಾಡಿಕೊಂಡು ನಿಧಾನಕ್ಕೆ ಹೋಟೆಲ್‌ನಿಂದ ಹಾವೇರಿ ಬಸ್ಸು ನಿಲ್ಲುವ ಪ್ಲಾಟ್‌ಫಾರ್ಮ್‌ಗೆ ಬಂದ.

ತಾನು ಹತ್ತಬೇಕಿದ್ದ ಬಸ್ಸನ್ನೇ ಎದುರು ನೋಡುತ್ತಾ ಸಂಕಪ್ಪ ತನ್ನ ಅಂಗೈಯಲ್ಲಿ ಹೀರಾ ತಂಬಾಕು, ಕರೀ ಸುಣ್ಣ ಹಾಕಿಕೊಂಡು ಅದನ್ನ ತನ್ನ ಹದಕ್ಕೆ ಒಗ್ಗುವವರೆಗೆ ಸರಿಯಾಗಿ ಮಿಜ್ಜಿ ಎರಡು ಬೆರಳಿನಿಂದ ಗುಪ್ಪೆ ಮಾಡಿ ಕೆಳದುಟಿಯಲ್ಲಿ ಅಡಗಿಸಿಟ್ಟುಕೊಂಡ. ಅದರಿಂದ ಆಗಾಗ ಉತ್ಪತ್ತಿ ಆಗುತ್ತಿದ್ದ ಉಗುಳನ್ನ ಪಿಚಕ್.. ಪಿಚಕ್.. ಅಂತ ಜನಸಂದಣಿ ಇಲ್ಲದ ಜಾಗೆಗೆ ಹೋಗಿ ಉಗುಳಿ ಬರತೊಡಗಿದ. ಹೀಗೆ ನಾಲ್ಕಾರು ಬಾರಿ ಹೋಗಿ ಬರುವುದೊರಳಗೆ ಹಾವೇರಿ ಬಸ್ಸು ಕಿವಿಗಡಚಿಕ್ಕುವಂತೆ ಹಾರ್ನ್ ಮಾಡುತ್ತಾ ಬಂದು ನಿಗದಿಪಡಿಸಿದ ಜಾಗದಲ್ಲಿ ನಿಂತಿತು. ಆ ಬಸ್ಸಿಗೆ ಜನ ಪೇಪರ್ರು, ಕರ್ಚೀಪು, ನೀರಿನ ಬಾಟಲಿ, ಮುಂತಾದ ವಸ್ತುಗಳನ್ನು ಬಸ್ಸಿನ ಕಿಡಕಿಯೊಳಗೆ ಎಸೆದು ತಂತಮ್ಮ ಸೀಟು ಕಾಯ್ದಿರಿಸಿ ಕೊಳ್ಳತೊಡಗಿದರು. ಸಂಕಪ್ಪ ತಾನೂ ತನ್ನ ಟವೆಲ್ಲನ್ನು ಯಾವುದಾದರೊಂದು ಕಿಡಕಿಯಲ್ಲಿ ಎಸೆಯಬೇಕು ಅಂದುಕೊಂಡು ಪ್ರಯತ್ನಿಸಿದ. ಆದರೆ ಅದು ಆ ಗೌಜುಗದ್ದಲದಲ್ಲಿ ಸಾಧ್ಯವಾಗಲಿಲ್ಲ. ನಂತರ ಗಿಜಿಗಿಜಿ ಅನ್ನುತ್ತಿದ್ದ ನೂಕು ನುಗ್ಗಲನ್ನು ಪ್ರಯಾಸದಿಂದ ಭೇದಿಸಿ ಮುಂದೆ ಡ್ರೈವರ್‌ನ ಎಡಬದಿಯ ಕಿಡಕಿ ಪಕ್ಕದ ಸೀಟನ್ನು ಗಿಟ್ಟಿಸಿಕೊಂಡು ತನ್ನ ತಳವೂರಿದ. ಹಾವೇರಿ ತಲುಪಿ ಅಲ್ಲಿಂದ ಟಮ್‌ಟಮ್ ಹತ್ತಿ ಒಂಬತ್ತು ಗಂಟೆಯೊಳಗೆ ತನ್ನೂರು ಕಳಾಸಪುರ ಮುಟ್ಟಿ ಮೂಲಿಮನಿ ಶೆಟ್ರನ್ನ ಬೆಟ್ಟಿಯಾದರೆ ಸಾಕೆಂದು ನಿಟ್ಟುಸಿರುಬಿಟ್ಟ. ಬಸ್ಸು ಹುಬ್ಬಳ್ಳಿಯ ಗಬ್ಬೂರು ಕ್ರಾಸು ದಾಟಿ ಹತ್ತಾರು ಕಿ.ಮೀ ಚಲಿಸಿದ ಮೇಲೆ ಸ್ವತಃ ಅವನ ಅರಿವಿಗೆ ಬಾರದಂತೆಯೇ ಅವನಿಗೆ ಜಂಪು ಹತ್ತಿತ್ತು.



* * *

ಇತ್ತೀಚೆಗೆ ಅಂದರೂ ವರ್ಷೋಪ್ಪತ್ತಿನ ಕೆಳಗೆ ಹೃದಯಕ್ಕೆ ಸ್ಟಂಟ್ ಅಳವಡಿಸಿಕೊಂಡಿದ್ದ ಸಂಕಪ್ಪ ತಾನಿನ್ನು ಹೆಚ್ಚು ದಿನ ಬದುಕುವುದಿಲ್ಲವೇನೋ ಎಂಬ ಭಯಕ್ಕೆ ಬಡಾಬಡಾ ಒಂದು ಎಕರೆ ಹೊಲ ಮಾರಿ ಯಶೋದಾಳ ಮದುವೆಯನ್ನ ಧಾಂ... ಧೂಂ... ಅಂತ ಶಾಸ್ತ್ರೋಕ್ತವಾಗಿ ಮಾಡಿ ಮುಗಿಸಿದ್ದ. ಅಳಿಯ ಸತೀಶ, ಹಾವೇರಿಯ ಗಳಗೇಶ್ವರ ಕೋ-ಆಪರೇಟಿವ್ ಸೊಸೈಟಿಯ ಬ್ಯಾಂಕ್‌ನಲ್ಲಿ ಕ್ಲರ್ಕ್ ಆಗಿ ನೌಕರಿ ಮಾಡುತ್ತಿದ್ದನೆಂಬ ಕಾರಣಕ್ಕಾಗಿ ಬೀಗರು ಹೇಳಿದ್ದಕ್ಕೆಲ್ಲಾ ತಲೆಯಾಡಿಸಿ ಅವರ ಅಣತಿಯಂತೆ ನಡೆದಿದ್ದ. ರೊಕ್ಕದ ವಿಷಯದಲ್ಲಿ ಕೈಹಿಡಿತ ಮಾಡದೇ ವರದಕ್ಷಿಣೆ, ವರೋಪಚಾರ, ಹಂದರಶೋಭೆ ಅಂತೆಲ್ಲಾ ಬಲ್ಲಬಲ್ಲಂಗ ಖರ್ಚು ಮಾಡಿ ಊರಿನವರ ಮಂದೆ ಹೆಡಕು ಹಾರಿಸುತ್ತಾ ಅಡ್ಡಾಡಿದ್ದ.

'ಮಗಳ್ಗೆ ಇಷ್ಟೆಲ್ಲಾ ಕರ್ಚಮಾಡೂ ಗರ್ಜ ಏನಿತ್ತ ಸಂಕ್ಯಾಗ? ಅಳಿಯ ನೌಕರಿದಾಂವಂತ ದುಮಷ್ಯಾನ್ ಕರ್ಚಮಾಡಿ ಏನ ಉಪೇಗೈತಿ. ಅಂವೇನ್ ತಿಂಗ್ಳಾ ತಿಂಗ್ಳಾ ಪಗಾರ ತಂದು ಸಂಕ್ಯಾನ್ ಕೈಯ್ಯಾಗ ಕೊಡ್ತಾನೇನ?' ಅಂತ ಕಳಸಾಪುರ ನೂರೆಂಟು ನಮೂನೆ ಹಲಬಿತ್ತು. ಆದರೆ ಸಂಕಪ್ಪ ಇದ್ಯಾವುದಕ್ಕೂ ದಿಮ್ ಹಲಕಾಯಿಸಿರಲಿಲ್ಲ.

'ಊರಾಗ ಹುಚ್ಚ ಲೌಡಿಮಕ್ಕ ಅದಾರ. ಯಾರಿಗೂ ದೊಡ್ಡಗುಣ ಅನ್ನೂದ ಇಲ್ಲ. ಖುಷಿಪಡು ವಿಚಾರಕ್ಕ ಸಂಕಟಾಬಿಟ್ಟ ಸಾಯ್ತಾರ. ಹೊಟ್ಟಿಕಿಚ್ಚಿಗೆ ಏನೇನೋ ಅಂತಾರ. ಆಡ್ತಾರ. ಹೊಯ್ಕೋತ ಹೊಕ್ಕಾರ' ಅಂತ ತನ್ನ ಪಾಡಿಗೆ ತಾನು ಸುಮ್ಮನಾಗಿದ್ದ. ಹೀಗಿರುವಾಗ ಬೀಗರು ಮತ್ತು ಸಂಕಪ್ಪನ ನಡುವೆ ಕೊಟ್ಟ ಮಾತಂತೆ ಕೊಡುವುದು, ತೆಗೆದುಕೊಳ್ಳುವುದೆಲ್ಲವೂ ಮುಗಿದಿತ್ತು. ವರ್ಷೋಪ್ಪತ್ತಿನ ತನಕ ಹಬ್ಬ- ಹರಿದಿನ, ಜಾತ್ರೆ, ಉತ್ಸವ ದಿನ ಇನ್ನಿತ್ಯಾದಿ ಕಾಬುದಾಗ ಪರಸ್ಪರ ಸೇರುವುದು. ಬಟ್ಟೆ-ಬರೆಯಂತಹ